ಸಾಮಾನ್ಯ ಅಧ್ಯಯನ

ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಸಾಮಾನ್ಯ ಅಧ್ಯಯನ

2025 ಮಾರ್ಚ್ 4 ರಂದು ದ್ರೋಣಾಚಾರ್ಯ ಅಕಾಡೆಮಿಯಲ್ಲಿ ನಡೆದ Super 30 mcq's ಪ್ರಶ್ನೆಗಳು

97ನೇ ಆಸ್ಕರ್ ಪ್ರಶಸ್ತಿ – 2025

- ಆಸ್ಕರ್ ಪ್ರಶಸ್ತಿ ಮೊದಲು ನೀಡಿದ ವರ್ಷ – 1929 ಮೇ 16
- ಆಸ್ಕರ್ ಪ್ರಶಸ್ತಿಯನ್ನು ನೀಡುವವರು – Academy of Motion Picture Arts and Sciences (AMPAS)
- 97ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿಯ ಪ್ರಧಾನ ಸಮಾರಂಭ 2025 ಮಾರ್ಚ್ 2ರಂದು ಅಮೆರಿಕಾದ ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸ್‌ನ ಡಾಲ್ಬಿ ಚಿತ್ರಮಂದಿರದಲ್ಲಿ ನಡೆಯಿತು.

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ
https://dhronacharyaacademy.com/

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಚಲನಚಿತ್ರ – ಅನೋರಾ

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಚಲನಚಿತ್ರ – ಅನೋರಾ

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ಚಲನಚಿತ್ರ – ಓಪನ್ ಹೈಮರ್

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ನಟ – ಅ್ಯಡ್ರಿಯನ್ ಬ್ರಾಡಿ (ದಿ ಬ್ರೂಟಲಿಸ್ಟ್)

(2002ರಲ್ಲಿ ದ ಪಿಯಾನಿಸ್ಟ್ ಚಲನಚಿತ್ರಕ್ಕಾಗಿ
ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದರು)

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ನಟ – ಸಿಲಿಯನ್ ಮರ್ಫಿ (ಓಪನ್ ಹೈಮರ್)

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ನಟಿ – ಮೈಕಿ ಮ್ಯಾಡಿಸನ್ (ಅನೋರಾ)

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ನಟಿ – ಎಮ್ಮಾ ಸ್ಟೋನ್ (ಪೂರ್ ಥಿಂಗ್ಸ್)

ಎಮ್ಮಾ ಸ್ಟೋನ್‌ರವರು 2017ರಲ್ಲಿ ಲಾಲಾ ಲ್ಯಾಂಡ್ ಚಿತ್ರದ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದಿದ್ದರು.

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ನಿರ್ದೇಶಕ – ಸೀನ್ ಬೇಕರ್ (ಅನೋರಾ)

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ನಿರ್ದೇಶಕ – ಕ್ರಿಸ್ಟೋಫರ್ ನೋಲನ್ (ಓಪನ್ ಹೈಮರ್)

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಪೋಷಕ ನಟಿ – ಜೋ ಸಲ್ಡಾನಾ (ಎಮಿಲಿಯಾ ಪೆರೆಜ್)

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ಪೋಷಕ ನಟಿ – ಡೇವಿನ್ ಜಾಯ್ ರಾಂಡೋಲ್ಫ್

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಪೋಷಕ ನಟ – ಕೀರನ್ ಕುಲ್ಕಿನ್ (ಎ ರಿಯಲ್ ಪೇನ್)

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ಪೋಷಕ ನಟ – ರಾಬರ್ಟ್ ಡೌನಿ ಜೂನಿಯರ್ (ಓಪನ್ ಹೈಮರ್)

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಸಾಕ್ಷ್ಯ ಚಿತ್ರ – ನೋ ಅದರ್ ಲ್ಯಾಂಡ್

(ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಸಂಘರ್ಷದಿಂದ ಎದುರಾದ ಸಂಕಷ್ಟಗಳನ್ನು ಅನಾವರಣಗೊಳಿಸುವ ಚಲನಚಿತ್ರ)

(ಪ್ಯಾಲೆಸ್ಟೀನ್ ಹೋರಾಟಗಾರ ಬಸೇಲ್ ಆದ್ರಾ, ಇಸ್ರೇಲಿ ಪತ್ರಕರ್ತ ಯುವಾಲ್ ಅಬ್ರಾಹಂ ರವರು ಜೊತೆಯಾಗಿ ಸುಮಾರು 5ವರ್ಷಗಳು ಶ್ರಮಿಸಿ ಈ ಸಾಕ್ಷ್ಯ ಚಿತ್ರ ನಿರ್ಮಿಸಿದ್ದಾರೆ)

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಸಾಕ್ಷ್ಯ ಚಿತ್ರ – ನೋ ಅದರ್ ಲ್ಯಾಂಡ್

96ನೇ ಆಸ್ಕರ್ ಪ್ರಶಸ್ತಿ – 2024

ಅತ್ಯುತ್ತಮ ಸಾಕ್ಷ್ಯ ಚಿತ್ರ – 20 ಡೇಸ್ ಇನ್ ಮರಿಯಾ ಫೋಲ್

●(ಈ ವಿಭಾಗದಲ್ಲಿ ಭಾರತದ ಟು ಕಿಲ್ ಎ ಟೈಗರ್ ಸಾಕ್ಷ್ಯ ಚಿತ್ರವು ಪ್ರಶಸ್ತಿಯ ಪೈಪೋಟಿಯಲ್ಲಿತ್ತು)

97ನೇ ಆಸ್ಕರ್ ಪ್ರಶಸ್ತಿ – 2025

ಅತಿ ಹೆಚ್ಚು ಪ್ರಶಸ್ತಿ ಪಡೆದ ಚಿತ್ರ – ಅನೋರಾ (5 ವಿಭಾಗದಲ್ಲಿ)

96ನೇ ಆಸ್ಕರ್ ಪ್ರಶಸ್ತಿ – 2024

● ಅತಿ ಹೆಚ್ಚು ಪ್ರಶಸ್ತಿ ಪಡೆದ ಚಿತ್ರ – ಓಪನ್ ಹೈಮರ್ (7 ವಿಭಾಗದಲ್ಲಿ)

97ನೇ ಆಸ್ಕರ್ ಪ್ರಶಸ್ತಿ – 2025

ಅನೋರಾ ಚಲನಚಿತ್ರ

ಲೈಂಗಿಕ ಕಾರ್ಯಕರ್ತೆಯೊಬ್ಬಳು ರಷ್ಯಾದ ಶ್ರೀಮಂತ ವ್ಯಕ್ತಿಯ ಮಗನನ್ನು ವಿವಾಹವಾದ ನಂತರ ನಡೆಯುವ ದುರಂತದ ಬದುಕಿನ ಕಥಾ ಹಂದರವನ್ನು ಒಳಗೊಂಡಿರುವ 'ಅನೋರಾ' ಚಲನಚಿತ್ರವು ಅತ್ಯುತ್ತಮ ಚಲನಚಿತ್ರ ಸೇರಿದಂತೆ ಐದು ವಿಭಾಗಳಲ್ಲಿ ಆಸ್ಕರ್ ಪ್ರಶಸ್ತಿಗೆ ಭಾಜನವಾಗಿದೆ.

ಸೀನ್ ಬೇಕರ್ ನಿರ್ದೇಶನದ ಅನೋರಾ ಚಲನಚಿತ್ರವನ್ನು 60 ಲಕ್ಷ ಡಾಲರ್ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಚಲನಚಿತ್ರವು **ಅತ್ಯುತ್ತಮ ಚಿತ್ರ, ಅತ್ಯುತ್ತಮ ನಿರ್ದೇಶಕ, ಅತ್ಯುತ್ತಮ ನಟಿ, ಅತ್ಯುತ್ತಮ ಮೂಲಚಿತ್ರ ಕಥೆ, ಅತ್ಯುತ್ತಮ ಚಿತ್ರ ಸಂಕಲನ** ವಿಭಾಗಗಳಲ್ಲಿ ಪ್ರಶಸ್ತಿಯನ್ನು ಪಡೆದಿದೆ.

97ನೇ ಆಸ್ಕರ್ ಪ್ರಶಸ್ತಿ – 2025

ವಿಶೇಷವಾಗಿ ಗಮನಿಸಿ –

- ಅತ್ಯುತ್ತಮ ಚಲನಚಿತ್ರ ವಿಭಾಗದಲ್ಲಿ ಅನೋರಾ ಚಲನಚಿತ್ರಕ್ಕೆ ಕಾನ್‌ಕ್ಲೇವ್ ಮತ್ತು ದಿ ಬ್ರೂಟಲಿಸ್ಟ್ ಚಲನಚಿತ್ರಗಳು ತೀವ್ರ ಪೈಪೋಟಿ ನೀಡಿದ್ದವು. ಒಟ್ಟು 9 ಚಲನಚಿತ್ರಗಳು ಅಂತಿಮ ಸುತ್ತಿನಲ್ಲಿ ಪ್ರತಿಸ್ಪರ್ಧೆ ಒಡ್ಡಿದ್ದವು.

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ
https://dhronacharyaacademy.com/

97ನೇ ಆಸ್ಕರ್ ಪ್ರಶಸ್ತಿ – 2025

ಅನುಜಾಗೆ ನಿರಾಸೆ –

- ಆಸ್ಕರ್ ಪ್ರಶಸ್ತಿಯ ಬೆಸ್ಟ್ ಲೈವ್ ಆ್ಯಕ್ಷನ್ ಕಿರುಚಿತ್ರ ವಿಭಾಗದಲ್ಲಿ ಪ್ರಶಸ್ತಿ ಸುತ್ತಿಗೆ ಅವಕಾಶ ಪಡೆದಿದ್ದ ಅನುಜಾಗೆ ನಿರಾಸೆಯಾಗಿದೆ. ಅನುಜಾ ಆಸ್ಕರ್ ಅಂಗಳಕ್ಕೆ ಪ್ರಶಸ್ತಿ ಸುತ್ತಿಗೆ ತಲುಪಿದ್ದ ಭಾರತೀಯ ಮೂಲದ ಏಕಮೇವ ಚಿತ್ರವಾಗಿತ್ತು.
  ಈ ಚಿತ್ರವನ್ನು ಆಡಂ ಜೆ ಗ್ರೇವ್ಸ್ ಮತ್ತು ಸುಚಿತ್ರಾ ಮಟ್ಟೈರವರು ನಿರ್ದೇಶಿಸಿದ್ದಾರೆ. ಈ ಚಿತ್ರವು ಬಾಲ ಕಾರ್ಮಿಕ ಪದ್ಧತಿ ಸಮಸ್ಯೆ ಬಗ್ಗೆ ಗಮನ ಸೆಳೆಯುತ್ತದೆ.

97ನೇ ಆಸ್ಕರ್ ಪ್ರಶಸ್ತಿ – 2025

ಬೆಸ್ಟ್ ಲೈವ್ ಆ್ಯಕ್ಷನ್ ಶಾರ್ಟ್ ಫಿಲ್ಮ್ – ಐ ಆ್ಯಮ್ ನಾಟ್ ಎ ರೋಬೊಟ್

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಅಂತರರಾಷ್ಟ್ರೀಯ ಸಿನಿಮಾ – ಐ ಆ್ಯಮ್ ಸ್ಟಿಲ್ ಹಿಯರ್ (ಬ್ರೆಜಿಲ್)

97ನೇ ಆಸ್ಕರ್ ಪ್ರಶಸ್ತಿ – 2025

ಅತ್ಯುತ್ತಮ ಅನಿಮೇಟೆಡ್ ಚಿತ್ರ – ಫ್ಲೊ

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ
https://dhronacharyaacademy.com/

ಆಸ್ಕರ್ ಪ್ರಶಸ್ತಿ ಪಡೆದ ಭಾರತೀಯರು –

- ಭಾನು ಅತೈಯಾ – ಅತ್ಯುತ್ತಮ ವಸ್ತ್ರ ವಿನ್ಯಾಸಕಿ – 1983 – ಸಿನಿಮಾ – ಗಾಂಧಿ, ನಿರ್ದೇಶನ – ರಿಚರ್ಡ್ ಅಟೆನ್‌ಬರೊ
- ಸತ್ಯಜಿತ್ ರೇ – 1992 – Honorary Award
- ಎ.ಆರ್ ರೆಹಮಾನ್ – ಅತ್ಯುತ್ತಮ ಗೀತೆ – 2009 – 2 ಬಾರಿ ಆಸ್ಕರ್
- ಗುಲ್ಜಾರ್ – 2009 – Best Original Song
- ರಸೂಲ್ ಪುಕ್ಕುಟ್ಟಿ – 2009 – ಸ್ಲಂಡಾಗ್ ಮಿಲಿಯನೇರ್, ಅತ್ಯುತ್ತಮ ಶಬ್ದ ಗ್ರಹಣಕ್ಕಾಗಿ
- ಅತ್ಯುತ್ತಮ ಹಾಡು (ಬೆಸ್ಟ್ ಒರಿಜಿನಲ್ ಸಾಂಗ್) (2023) – ನಾಟು ನಾಟು (ಆರ್‌ಆರ್‌ಆರ್) ಸಂಗೀತ – ಎಂ.ಎಂ ಕೀರವಾಣಿ ಗೀತೆ ರಚನೆ – ಚಂದ್ರಬೋಸ್

ಆಸ್ಕರ್ ಪ್ರಶಸ್ತಿ ಪಡೆದ ಭಾರತೀಯರು –

97ನೇ ಆಸ್ಕರ್ ಪ್ರಶಸ್ತಿ – 2025

ಅತೀ ಹೆಚ್ಚು ಪ್ರಶಸ್ತಿಗಳನ್ನು ಪಡೆದ 2ನೇ ಚಿತ್ರ – ದಿ ಬ್ರೂಟಲಿಸ್ಟ್

96ನೇ ಆಸ್ಕರ್ ಪ್ರಶಸ್ತಿ – 2024

ಅತೀ ಹೆಚ್ಚು ಪ್ರಶಸ್ತಿಗಳನ್ನು ಪಡೆದ 2ನೇ ಚಿತ್ರ – ಪೂರ್ ಥಿಂಗ್ಸ್

1. ರಾಷ್ಟ್ರೀಯ ಮತದಾರರ ದಿನಕ್ಕೆ ಸಂಬಂಧಿಸಿದ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ :

ಎ) 1950 ಜನವರಿ 25ರಂದು ಕೇಂದ್ರ ಚುನಾವಣಾ ಆಯೋಗ ಸ್ಥಾಪನೆಯಾದ ನೆನೆಪಿಗಾಗಿ 2011ರಿಂದ ಪ್ರತಿ ವರ್ಷ ಜನವರಿ 25ನ್ನು ರಾಷ್ಟ್ರೀಯ ಮತದಾರರ ದಿನ ಎಂದು ಆಚರಿಸಲಾಗುತ್ತದೆ.

ಬಿ) 2025 ಜನವರಿ 25ರ 15ನೇ ಮತದಾರರ ದಿನದ ಧ್ಯೇಯವಾಕ್ಯ ಮತದಾನಕ್ಕಿಂತ ಮತ್ತೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುತ್ತೇನೆ.

ಸಿ) 2025 ಜನವರಿ 25ರಂದು ಅಂದಿನ ಮುಖ್ಯ ಚುನಾವಣಾ ಆಯುಕ್ತರಾದ ಶ್ರೀ ರಾಜೀವ್ ಕುಮಾರ್ ಅವರಿಂದ "ಇಂಡಿಯಾ ವೋಟ್ಸ್ 2024: ಎ ಸಾಗಾ ಆಫ್ ಡೆಮಾಕ್ರಸಿ" ಪುಸ್ತಕದ ಮೊದಲ ಪ್ರತಿಯನ್ನು ಮಾನ್ಯ ರಾಷ್ಟ್ರಪತಿಯವರು ಸ್ವೀಕರಿಸಿದರು.

ಡಿ) 2024ರಲ್ಲಿ 17ನೇ ಲೋಕಸಭೆ ಚುನಾವಣೆ ನಡೆದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ ?

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಅತ್ಯುತ್ತಮ ಚುನಾವಣಾ ನಿರ್ವಹಣಾ ಪ್ರಶಸ್ತಿ 2024 -2025

- ಭಾರತದ ಚುನಾವಣಾ ಆಯೋಗವು 2024-25ನೇ ಸಾಲಿನ ಅತ್ಯುತ್ತಮ ಚುನಾವಣಾ ನಿರ್ವಹಣಾ ಪ್ರಶಸ್ತಿಯನ್ನು ಕರ್ನಾಟಕದ ಕಲಬುರ್ಗಿ ಜಿಲ್ಲೆಯ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಂ ರವರಿಗೆ ಮಾನ್ಯ ರಾಷ್ಟ್ರಪತಿಯವರು ಪ್ರಧಾನ ಮಾಡಿದರು.

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ
https://dhronacharyaacademy.com/

ರಾಷ್ಟ್ರೀಯ ಮತದಾರರ ದಿನ – ಜನವರಿ 25

2. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಲೋಕಸಭೆಯ ಸದಸ್ಯರು

2) ರಾಜ್ಯಸಭೆಯ ಚುನಾಯಿತ ಸದಸ್ಯರು

3) ವಿಧಾನ ಸಭೆಯ ಸದಸ್ಯರು

4) ರಾಜ್ಯಸಭೆಗೆ ನಾಮಕರಣವಾದ ಸದಸ್ಯರು

ಮೇಲಿನವರುಗಳಲ್ಲಿ ಯಾರು ಯಾರು ಉಪರಾಷ್ಟ್ರಪತಿಯನ್ನು ಚುನಾಯಿಸುವ ಚುನಾವಣಾ ಕಾಲೇಜಿನಲ್ಲಿ ಇರುತ್ತಾರೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮತ್ತು 3 ಮಾತ್ರ ಸರಿಯಾಗಿವೆ.

ಸಿ) 1, 3 ಮತ್ತು 4 ಸರಿಯಾಗಿವೆ.

ಡಿ) 1, 2 ಮತ್ತು 4 ಸರಿಯಾಗಿವೆ.

3. ಭಾರತದ ಸಂವಿಧಾನದಲ್ಲಿ ಈ ಕೆಳಗಿನ ಯಾವುದನ್ನು ಉಲ್ಲೇಖಿಸಲಾಗಿದೆ.

1) ಮಾನ್ಯ ರಾಷ್ಟ್ರಪತಿಯು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿರಬಾರದು

2) ಸಂಸತ್ತು ಎರಡು ಸದನಗಳು ಮತ್ತು ರಾಷ್ಟ್ರಪತಿಯಿಂದ ಕೂಡಿರಬೇಕು.

3) ರಾಜ್ಯಸಭೆಯ ಅಧ್ಯಕ್ಷತೆಯನ್ನು ಮಾನ್ಯ ಉಪರಾಷ್ಟ್ರಪತಿಯವರು ವಹಿಸಬೇಕು

4) ರಾಜ್ಯಸಭೆಯ ಅಧ್ಯಕ್ಷರು ಆ ಸದನದ ಸದಸ್ಯರಾಗಿರಬೇಕು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಮಾತ್ರ ಸರಿಯಾಗಿವೆ.

ಸಿ) 1, 2 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 4 ಸರಿಯಾಗಿವೆ.

4. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಅನುಚ್ಛೇದ 153	I. ರಾಷ್ಟ್ರಪತಿಯವರಿಂದ ರಾಜ್ಯಪಾಲರ ನೇಮಕ
ಬಿ) ಅನುಚ್ಛೇದ 155	II. ರಾಜ್ಯಕ್ಕೆ ರಾಜ್ಯಪಾಲರ ಹುದ್ದೆ ಒದಗಿಸಿದೆ.
ಸಿ) ಅನುಚ್ಛೇದ 165	III. ರಾಷ್ಟ್ರಪತಿಯ ಆಡಳಿತ
ಡಿ) ಅನುಚ್ಛೇದ 356	IV. ಅಡ್ವೋಕೇಟ್ ಜನರಲ್ ನೇಮಕ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (III) (IV)
ಸಿ) (IV) (II) (III) (I)
ಡಿ) (II) (I) (IV) (III)

5. ಸಂವಿಧಾನದ ಪ್ರಸ್ತಾವನೆಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

ಹೇಳಿಕೆ I : ಸಂವಿಧಾನದ ಪ್ರಸ್ತಾವನೆಗೆ 1976ರಲ್ಲಿ 42ನೇ ತಿದ್ದುಪಡಿ ಮಾಡಿ ಸಮಾಜವಾದಿ, ಜಾತ್ಯಾತೀತ ಮತ್ತು ಐಕ್ಯತೆ ಎಂಬ ಪದಗಳನ್ನು ಸೇರಿಸಲಾಗಿದೆ.

ಹೇಳಿಕೆ II : ಪಂಡಿತ್ ಜವಾಹರಲಾಲ್ ನೆಹರುರವರು 1929 ಡಿಸೆಂಬರ್ 13ರಂದು ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯ (Objective Resolution) ವನ್ನು ಮಂಡಿಸಿದರು.

ಮೇಲಿನ ಹೇಳಿಕೆಗಳಿಗೆ ಸಂಬಂಧಪಟ್ಟಂತೆ, ಕೆಳಗಿನ ಯಾವುದು ಸರಿ

1. ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಹಾಗೂ ಹೇಳಿಕೆ II, ಹೇಳಿಕೆ Iಕ್ಕೆ ಸರಿಯಾದ ವಿವರಣೆಯಾಗಿದೆ.
2. ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಹಾಗೂ ಹೇಳಿಕೆ II, ಹೇಳಿಕೆ Iಕ್ಕೆ ಸರಿಯಾದ ವಿವರಣೆ ಅಲ್ಲ.
3. ಹೇಳಿಕೆ I ಸರಿ ಮತ್ತು ಹೇಳಿಕೆ II ತಪ್ಪು
4. ಹೇಳಿಕೆ I ತಪ್ಪು ಮತ್ತು ಹೇಳಿಕೆ II ಸರಿ

6. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I ಅಶೋಕನ ಶಾಸನಗಳು	ಪಟ್ಟಿ – II ಇರುವ ಜಿಲ್ಲೆ
ಎ) ಸನ್ನತಿ ಶಾಸನ	I. ಚಿತ್ರದುರ್ಗ
ಬಿ) ಪಾಲ್ಕಿಗುಂಡ, ಗವಿಮಠ ಶಾಸನಗಳು	II. ಕೊಪ್ಪಳ
ಸಿ) ನಿಟ್ಟೂರು, ಉದಯಗೋಳಂ ಶಾಸನಗಳು	III. ಬಳ್ಳಾರಿ
ಡಿ) ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗರಾಮೇಶ್ವರ ಶಾಸನಗಳು	IV. ಕಲಬುರಗಿ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (III) (IV)
ಸಿ) (IV) (II) (III) (I)
ಡಿ) (IV) (I) (II) (III)

ಮಸ್ಕಿ ಶಾಸನ – ರಾಯಚೂರು



ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

7. ಕುಶಾನರ ಅತ್ಯಂತ ಶ್ರೇಷ್ಠ ಅರಸ ಕಾನಿಷ್ಕನಿಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಕಾನಿಷ್ಕನು ಕಿ.ಶ 78ರಲ್ಲಿ ಶಕ (ಶಾಲಿವಾಹನ ಶಕ) ವರ್ಷವನ್ನು ಆರಂಭಿಸಿದನು. ಈತನ ರಾಜಧಾನಿ ಪುರುಷಪುರ (ಇಂದಿನ ಪೇಶಾವರ, ಪಾಕಿಸ್ತಾನದಲ್ಲಿದೆ.) ಈತನ ಇನ್ನೊಂದು ರಾಜಧಾನಿ ಮಥುರಾ (ಉತ್ತರ ಪ್ರದೇಶ)

2) ಕಾನಿಷ್ಕನ ಆಸ್ಥಾನದಲ್ಲಿ ಅಶ್ವಘೋಷ, ಚರಕ, ನಾಗಾರ್ಜುನ, ಸಂಗರಕ್ಷ, ವಸುಮಿತ್ರ ಮುಂತಾದ ಕವಿಗಳು ಇದ್ದರು.

3) ಕಾನಿಷ್ಕನು ಕಾನಿಸ್‌ಪುರ ಎಂಬ ಪಟ್ಟಣಕ್ಕೆ ಅಡಿಪಾಯ ಹಾಕಿದನು. ಇದು ಕಾನಿಷ್ಕಪುರ ಎಂದು ಹೆಸರಾಗಿತ್ತು. ಪ್ರಸ್ತುತ ಇದು ಶ್ರೀ ನಗರ ಎಂದು ಹೆಸರಾಗಿದೆ.

4) ಕಾನಿಷ್ಕನು ಬೌದ್ಧಧರ್ಮದ ಪ್ರಚಾರಕ್ಕಾಗಿ ದೇಶ–ವಿದೇಶಗಳಿಗೆ ಪ್ರಚಾರಕರನ್ನು ಕಳುಹಿಸಿಕೊಟ್ಟಿದ್ದನು. ಆದ್ದರಿಂದ ಕಾನಿಷ್ಕನನ್ನು 2ನೇ ಅಶೋಕ ಎನ್ನುವರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಮಾತ್ರ ಸರಿಯಾಗಿವೆ.

ಸಿ) 1, 2 ಮತ್ತು 3 ಸರಿಯಾಗಿವೆ.

ಡಿ) 1, 2, 3 ಮತ್ತು 4 ಸರಿಯಾಗಿವೆ.

8. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I ಕೃತಿಗಳು	ಪಟ್ಟಿ – II ಬರೆದವರು
ಎ) ಮೃಚ್ಛಕಟಿಕ	I. ವಿಶಾಖದತ್ತ
ಬಿ) ಮುದ್ರಾ ರಾಕ್ಷಸ, ದೇವಿಚಂದ್ರಗುಪ್ತಂ	II. ದಂಡಿ
ಸಿ) ದಶಕುಮಾರ ಚರಿತೆ	III. ಭವಭೂತಿ
ಡಿ) ಉತ್ತರರಾಮಚರಿತೆ	IV. ಶೂದ್ರಕ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (III) (IV)
ಸಿ) (IV) (II) (III) (I)
ಡಿ) (IV) (I) (II) (III)

9. ಮೊಘಲ್ ಸಾಮ್ರಾಜ್ಯದ ಸ್ಥಾಪಕ ಬಾಬರ್‌ನ ಕಾಲದಲ್ಲಿ ನಡೆದ ಯುದ್ಧಗಳನ್ನು ಕಾಲನುಕ್ರಮದಲ್ಲಿ ಬರೆಯಿರಿ.

ಎ) ಪ್ರಥಮ ಪಾಣಿಪತ್ ಕದನ, ಕಣ್ವ ಕದನ, ಚಂದೇರಿ ಕದನ, ಘಾಗ್ರಾ ಕದನ

ಬಿ) ಪ್ರಥಮ ಪಾಣಿಪತ್ ಕದನ, ಚಂದೇರಿ, ಕದನ ಕಣ್ವ ಕದನ, ಘಾಗ್ರಾ ಕದನ

ಸಿ) ಪ್ರಥಮ ಪಾಣಿಪತ್ ಕದನ, ಚಂದೇರಿ ಕದನ, ಘಾಗ್ರಾ ಕದನ, ಕಣ್ವ ಕದನ

ಡಿ) ಪ್ರಥಮ ಪಾಣಿಪತ್ ಕದನ, ಘಾಗ್ರಾ ಕದನ, ಚಂದೇರಿ ಕದನ, ಕಣ್ವ ಕದನ

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

1. ಪ್ರಥಮ ಪಾಣಿಪತ್ ಕದನ – 1526

   ಬಾಬರ್ ಮತ್ತು ಇಬ್ರಾಹಿಂ ಲೂಧಿ

2. ಕಣ್ವ ಕದನ – 1527

   ಬಾಬರ್ ಮತ್ತು ಮೇವಾರದ ರಜಪೂತರ ಅರಸ ರಾಣಾ ಸಂಗ

3. ಚಂದೇರಿ ಕದನ – 1528

   ಬಾಬರ್ ಮತ್ತು ಮಾಳವದ ಅರಸ ಮೇದಿನಿರಾಯ

4. ಘಾಗ್ರಾ ಕದನ – 1529

   ಬಾಬರ್ ಮತ್ತು ಮಹಮ್ಮದ್ ಲೂಧಿ

10. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I ಅರಸರು	ಪಟ್ಟಿ – II ವಿದೇಶಿ ಪ್ರವಾಸಿಗರು
ಎ) 1ನೇ ದೇವರಾಯ	I. ಅಬ್ದುಲ್ ರಜಾಕ್
ಬಿ) 2ನೇ ದೇವರಾಯ	II. ನಿಕೋಲೋಕೌಂಟಿ
ಸಿ) ಶ್ರೀ ಕೃಷ್ಣದೇವರಾಯ	III.ಫರ್ನಾವೋ ನ್ಯೂನಿಜ್
ಡಿ) ಅಚ್ಯುತರಾಯ	IV. ಡುರೇಟ್ ಬಾರ್ಬೋಸ್, ಡೊಮಿಂಗೋ ಫಯಾಸ್

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (II) (I) (IV) (III)
ಬಿ) (II) (I) (III) (IV)
ಸಿ) (IV) (II) (III) (I)
ಡಿ) (IV) (I) (II) (III)

ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು

1ನೇ ದೇವರಾಯ – ನಿಕೋಲೋಕೌಂಟಿ – ಇಟಲಿ

2ನೇ ದೇವರಾಯ – ಅಬ್ದುಲ್ ರಜಾಕ್ – ಪರ್ಷಿಯಾ

ಶ್ರೀ ಕೃಷ್ಣದೇವರಾಯ – ಡುರೇಟ್ ಬಾರ್ಬೋಸ್, ಡೊಮಿಂಗೋ ಫಯಾಸ್ – ಪೋರ್ಚುಗಲ್

ಅಚ್ಯುತರಾಯ – ಫರ್ನಾವೋ ನ್ಯೂನಿಜ್ – ಪೋರ್ಚುಗಲ್

ವಿರೂಪಾಕ್ಷ – ನಿಕೆಟಿನ್ – ರಷ್ಯಾ

ಫೆಡ್ರಿಕ್ ಸೀಸರ್ – ತಾಳಿಕೋಟೆ ಕದನ ನಡೆದ ನಂತರ ಭೇಟಿ

11. ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ :

i) ಚೌರಿ–ಚೌರ ಘಟನೆ

ii) ಚಂಪಾರಣ್ಯ ಸತ್ಯಾಗ್ರಹ

iii) ಬಾರ್ಡೋಲಿ ಸತ್ಯಾಗ್ರಹ

iv) ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ

1) (iv), (ii), (i), (iii)

2) (iii), (ii), (i), (iv)

3) (ii), (iv), (iii), (i)

4) (ii), (iii), (i), (iv)

12. ಗುರುತಿಸಿ

ಬ್ರಿಟಿಷ್ ಪಾರ್ಲಿಮೆಂಟ್‌ಗೆ ಆಯ್ಕೆಯಾದ ಮೊದಲ ಭಾರತೀಯ, ಸ್ವರಾಜ್ಯ ಎಂಬ ಪದವನ್ನು ಮೊದಲು ಬಳಸಿದವರು, ಭಾರತದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯವನ್ನು ಅಳತೆ ಮಾಡಿದವರು, ದ ಪಾವರ್ಟಿ ಅಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ ಪುಸ್ತಕವನ್ನು ಬರೆದವರು, ಸಂಪತ್ತಿನ ಸೋರಿಕೆ ಸಿದ್ಧಾಂತದ ಪ್ರತಿಪಾದಕರು, 1886ರ ಕೊಲ್ಕತ್ತಾ ಅಧಿವೇಶನ, 1893ರ ಲಾಹೋರ್ ಅಧಿವೇಶನ, 1906ರ ಕೊಲ್ಕತ್ತಾ ಅಧಿವೇಶನದ ಅಧ್ಯಕ್ಷರಾಗಿದ್ದರು. ಇವರ ಪತ್ರಿಕೆಗಳು ಜ್ಞಾನ ಪ್ರಸಾರಕ, ಸತ್ಯವಾದಿ, ವಾಯ್ಸ್ ಆಫ್ ಇಂಡಿಯಾ, ರಾಸ್ತ್ ಗೋಫ್ತರ್.

ಮೇಲ್ಕಂಡ ಹೇಳಿಕೆ ಈ ಕೆಳಕಂಡ ಯಾರಿಗೆ ಸಂಬಂಧಿಸಿದೆ ?

ಎ) ಸುರೇಂದ್ರನಾಥ ಬ್ಯಾನರ್ಜಿ
ಬಿ) ದಾದಾಬಾಯಿ ನವರೋಜಿ
ಸಿ) ಗೋಪಲ ಕೃಷ್ಣ ಗೋಖಲೆ
ಡಿ) ಮಹಾತ್ಮ ಗಾಂಧಿಜಿ

13. ತುಂಗಭದ್ರಾ, ಮೂಸಿ, ಭೀಮಾ, ದಿಂಡಿ, ದೂದ್‌ಗಂಗಾ, ಮಲಪ್ರಭಾ, ಘಟಪ್ರಭಾ, ಪಂಚಗಂಗಾ, ಕೊಯ್ನಾ, ದೋಣಿ, ವೆನ್ನಾ, ಮುನ್ನೇರು, ಪಾಲೆರು, ವರ್ಣಾ, ಯೆರ್ಲಾ ಇವು ಈ ಕೆಳಕಂಡ ಯಾವ ನದಿಯ ಉಪನದಿಗಳು.

ಎ) ಕಾವೇರಿ

ಬಿ) ಕೃಷ್ಣ

ಸಿ) ಗೋದಾವರಿ

ಡಿ) ಬ್ರಹ್ಮಪುತ್ರ

14. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I ಜ್ವಾಲಾಮುಖಿ ಹೆಸರು	ಪಟ್ಟಿ – II ಇರುವ ದೇಶ
ಎ) ಅಕಾಂಗುವಾ	I. ಅಂಡಮಾನ್– ನಿಕೋಬಾರ್
ಬಿ) ಗೊರಾಂಗೊರೊ	II. ತಾಂಜೆನಿಯಾ
ಸಿ) ಅರ್ಧರ್‌ಸೀಟ್	III. ಸ್ಕಾಟ್ಲೆಂಡ್
ಡಿ) ನಾರ್ಕೊಂಡಾಮ್	IV. ಅರ್ಜೆಂಟೈನಾ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV) ಬಿ) (II) (I) (III) (IV)

ಸಿ) (IV) (II) (III) (I) ಡಿ) (IV) (I) (II) (III)

15. 18ನೇ ಭಾರತೀಯ ಅರಣ್ಯ ಸ್ಥಿತಿಗತಿ ವರದಿಗೆ ಸಂಬಂಧಿಸಿದ ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಿ :

ಎ) ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಶ್ರೀ ಭೂಪೇಂದರ್ ಯಾದವ್‌ರವರು 2024 ಡಿಸೆಂಬರ್ 21ರಂದು ಉತ್ತರಾಖಂಡ್ ರಾಜ್ಯದ ಡೆಹ್ರಾಡೂನ್‌ನಲ್ಲಿರುವ ಅರಣ್ಯ ಸಂಶೋಧನಾ ಸಂಸ್ಥೆಯಲ್ಲಿ "ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ವರದಿ 2023" (ISFR 2023) ಅನ್ನು ಬಿಡುಗಡೆ ಮಾಡಿದರು

ಬಿ) ಪ್ರಸ್ತುತ ಮೌಲ್ಯ ಮಾಪನದ ಪ್ರಕಾರ, ಒಟ್ಟು ಅರಣ್ಯ ಮತ್ತು ಮರಗಳ ವ್ಯಾಪ್ತಿಯು 8,27,357 ಚದರ ಕಿಲೋಮೀಟರ್ ಆಗಿದೆ, ಇದು ದೇಶದ ಭೌಗೋಳಿಕ ಪ್ರದೇಶದ ಶೇಕಡಾ 25.17 ರಷ್ಟಿದೆ.

ಸಿ) ಪ್ರಸ್ತುತ ಮೌಲ್ಯಮಾಪನವು 19 ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳು ಭೌಗೋಳಿಕ ಪ್ರದೇಶದ ಶೇಕಡಾ 33 ಕ್ಕಿಂತ ಹೆಚ್ಚಿನ ಅರಣ್ಯವನ್ನು ಹೊಂದಿವೆ. ಇವುಗಳಲ್ಲಿ ಮಿಜೋರಾಂ, ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ ಮತ್ತು ಮಣಿಪುರ ಎಂಬ ಎಂಟು ರಾಜ್ಯಗಳು/UTಗಳು ಶೇಕಡಾ 75 ಕ್ಕಿಂತ ಹೆಚ್ಚು ಅರಣ್ಯವನ್ನು ಹೊಂದಿವೆ.

ಡಿ) ಅರಣ್ಯ ವಿಷಯವು ಕೇಂದ್ರ ಪಟ್ಟಿಯಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ ?

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

16. ರಾಮಸರ್ ತಾಣ ಮತ್ತು ರಾಜ್ಯಗಳನ್ನು ಹೊಂದಿಸಿ ಬರೆಯಿರಿ:

ರಾಮಸರ್ ತಾಣಗಳು	ರಾಜ್ಯಗಳು
A. ರುದ್ರಸಾಗರ ಸರೋವರ	I. ಹರಿಯಾಣ
B. ಬಖೀರ ವನ್ಯಜೀವಿ ತಾಣ	II. ತ್ರಿಪುರ
C. ಸುಲ್ತಾನ್‌ಪುರ ರಾಷ್ಟ್ರೀಯ ಉದ್ಯಾನವನ	III. ಉತ್ತರ ಪ್ರದೇಶ
D. ಪಾಲ ತೇವ ಪ್ರದೇಶ	IV. ಮಿಜೋರಾಂ

ಉತ್ತರ ಆಯ್ಕೆಗಳು:

1) A-IV, B-III, C-I, D-II
2) A-III, B-II, C-I, D-IV
3) A-II, B-III, C-I, D-IV
4) A-II, B-IV, C-III, D-I

ಸಾಧನೆಯ ಹಾದಿಗೊಂದು ಹೊತ್ತಿಗೆ

General Studies

2024 12ನೇ ಪರಿಷ್ಕೃತ ಆವೃತ್ತಿ

NCERT-DSERT ನೂತನ ಪಠ್ಯಕ್ರಮ, APPS/WEB INFORMATION ನ ಪ್ರಚಲಿತ ಮಾಹಿತಿ
KSP, KPSC, KEA, UPSC ಪ್ರಶ್ನೆಪತ್ರಿಕೆಗಳ ಅನ್ವಯ ಪರಿಷ್ಕರಿಸಿ ರಚಿಸಲಾಗಿದೆ

ಭಾರತದಲ್ಲಿರುವ ರಾಜ್ಯಗಳು ವಿಶೇಷವಾಗಿ

ಕರ್ನಾಟಕ

ಪುಸ್ತಕದ ವಿಶೇಷತೆಗಳು

- ಭಾರತದ 28 ರಾಜ್ಯಗಳ ಮಾಹಿತಿ
- ಭಾರತದ 8 ಕೇಂದ್ರಾಡಳಿತ ಪ್ರದೇಶಗಳು
- ಕರ್ನಾಟಕದ 31 ಜಿಲ್ಲೆಗಳ ಮಾಹಿತಿ
- ಸಾಮಾನ್ಯ ಅಧ್ಯಯನದ ವಿಷಯಗಳು
- ಭಾರತದ ಸಂವಿಧಾನ
- ಭಾರತದ ಇತಿಹಾಸ
- ಭಾರತದ ಭೂಗೋಳ
- ಸಾಮಾನ್ಯ ಅರ್ಥಶಾಸ್ತ್ರ
- ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ
- ಕಂಪ್ಯೂಟರ್ ಮತ್ತು ಪೊಲೀಸ್ ಇಲಾಖೆ
- ಯುನೆಸ್ಕೋ ಪಟ್ಟಿ, ರಾಮ್ಸರ್ ತಾಣಗಳು
- ಪ್ರಶಸ್ತಿಗಳು ಮತ್ತು ಕ್ರೀಡಾಕೂಟಗಳು
- ಪ್ರಮುಖ ಮಿಲಿಟರಿ ಸಮರಾಭ್ಯಾಸಗಳು
- ಕರ್ನಾಟಕ ಬಜೆಟ್-2024-25

ಕರ್ನಾಟಕದ ಅತ್ಯುತ್ತಮ GK ಪುಸ್ತಕ

KAS | PDO | VAO | PSI | FDA | SDA | TET | GROUP-C | POLICE

YouTube @HussainappaNayakaAcademy ಹುಸೇನಪ್ಪ ನಾಯಕ

ಹುಸೇನಪ್ಪ ನಾಯಕ • ಪ್ರಚಲಿತ ಘಟನೆಗಳ ಸಮಗ್ರ ಅಧ್ಯಯನ ಪುಸ್ತಕ

ಪರಿಷ್ಕೃತ 3ನೇ ಆವೃತ್ತಿ

2024

ಸಾಧನೆಯ ಹಾದಿಗೊಂದು ಹೊತ್ತಿಗೆ

ಭಾರತದ ಸಂವಿಧಾನ

CONSTITUTION OF INDIA

KAS PDO PSI FDA SDA TET GROUP-C POLICE

ಪದವಿ ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತ

ಹುಸೇನಪ್ಪ ನಾಯಕ

ಭಾರತದ ಸಂವಿಧಾನ • ಹುಸೇನಪ್ಪ ನಾಯಕ •

thanks
FOR WATCHING